ಹುಬ್ಬಳ್ಳಿ ವಿದ್ಯುತ್ ಸರಬರಾಜು
ಕಂಪನಿ ನಿಯಮಿತ
[ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ]
ಕಂಪನಿ ಕಾರ್ಯಾಲಯ
ನವನಗರ, ಹಳೇ ಪು.ಬೆಂ. ರಸ್ತೆ, ಹುಬ್ಬಳ್ಳಿ - 580 25

HUBLI ELECTRICITY SUPPLY
COMPANY LIMITED
[Wholly owned Govt. of Karnataka undertaking]
Company Office,
Navanagar, Old P.B.Road, Hubballi-580025
E-mail ID: gmadmhr.hescom@gmail.com

Corporate Identity Number[CIN]: U31401KA2002SGC030437

**ವಿಷಯ** : ಹುವಿಸಕಂನಿಯ ವ್ಯಾಪ್ತಿಯಲ್ಲಿ ಬಳಕೆಯಲ್ಲಿರುವ ಎಲ್ಲ 3000 ಸಂಖ್ಯೆಯ BSNL CUG ಸಂಪರ್ಕಗಳಿಗೆ HESCOM corporate signature tune ನ್ನು ರಿಂಗ್ ಬ್ಯಾಕ್ ಟ್ಯೂನ್ ಆಗಿ ಬಳಸಲು ಅನುಮೋದಿಸುವ ಕುರಿತು.

**ಉಲ್ಲೇಖ** :
1. ನಿಗಮ ಕಛೇರಿ ಆದೇಶ ಸಂಖ್ಯೆ: ಹುವಿಸಕಂನಿ/ಪ್ರವ್ಯ/ಲೆ(ಸಿ)/ಸಲೆ(ಸಿ)/ಹಿಸ(ವಿ)/ಕಾರಕ-1916[13688]/2015-16/CYS-6905 ದಿನಾಂಕ: -30.03.2022
2. PLO no:- 1716/18-19 para no:-45 ರಲ್ಲಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ದಿನಾಂಕ:14.02.2022 ರಲ್ಲಿ ಅನುಮೋದಿಸಿರುವಂತೆ.
3. M/S BSNL demand note no:CO(MS)HESCOM/CUG/2019-20/VOL-1/6 DATED:-27.01.2022

*****

<u>ಪೀಠಿಕೆ:-</u>

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತವು ಫೆಬ್ರುವರಿ – 2012 ರ ತಿಂಗಳಿಂದ ಭಾರತೀಯ ಸಂಚಾರ ನಿಗಮ ನಿಯಮಿತದ ವತಿಯಿಂದ ಮೊಬೈಲ್ ಸಿ.ಯು.ಜಿ ಅಡಿಯಲ್ಲಿ ಒಳಪಡಿಸಿ, ಸೇವೆಯನ್ನು ಪಡೆಯಲಾಗಿದ್ದು. ಸದರಿ ಸೇವೆಯನ್ನು ಕಾಲ ಕಾಲಕ್ಕೆ ಅಗತ್ಯಕ್ಕೆ ಅನುಸಾರವಾಗಿ, 31.03.2022 ರವರೆಗೆ ಮುಂದುವರೆಸಿರುವಂತೆ, ಉಲ್ಲೇಖ(1) ರ ಆದೇಶದಲ್ಲಿ ಆರ್ಥಿಕ ವರ್ಷ 2022-23ಕ್ಕೆ ಸದರಿ ಸೇವೆಯನ್ನು ಮುಂದುವರೆಸಲಾಗಿರುತ್ತದೆ.

ಸದರಿ ಸಿ.ಯು.ಜಿ ಸೇವೆ ಅಡಿಯಲ್ಲಿ ಒಟ್ಟು 3000 ಸಂಖ್ಯೆಯ ಸಂಪರ್ಕಗಳಿದ್ದು, ಸದರಿ ಸಂಪರ್ಕಗಳಿಗೆ ಮುಖಾಂತರ ವಿದ್ಯುತ್ ಬಳಕೆಯ ಕುರಿತು ರಿಂಗ್ ಬ್ಯಾಕ್ ಟ್ಯೂನ್ ನ್ನು 2017 ರಿಂದ ಅಳವಡಿಸಿದ್ದು ಇರುತ್ತದೆ.ಸದರಿ ಸೇವೆಯನ್ನು ಕಾಲ ಕಾಲಕ್ಕೆ ಅಗತ್ಯಕ್ಕೆ ಅನುಸಾರವಾಗಿ, 31.03.2022 ರವರೆಗೆ ಮುಂದುವರೆಸಲಾಗಿರುತ್ತದೆ.

ಸದರಿ ಸಿಯುಜಿ ಸೇವೆಯ ಅಡಿಯಲ್ಲಿ ಬರುವ ಎಲ್ಲಾ ಸಂಪರ್ಕಗಳಿಗೆ ರಿಂಗ್ ಬ್ಯಾಕ್ ಟ್ಯೂನ್ ಸೇವೆಯನ್ನು ಮುಂದಿನ ಆರ್ಥಿಕ ವರ್ಷ 2022-23 ಕ್ಕೆ ಮುಂದುವರೆಸಲು Sub Divisional Engineer (CSC),O/o GMT, BSNL, ಹುಬ್ಬಳ್ಳಿ ರವರ ಪತ್ರಸಂಖ್ಯೆ: CO(MS) HESCOM / CUG /2019-20 / VOL-1 / 6 DATED:-27.01.2022 ರಲ್ಲಿ ಒಟ್ಟು 3000 ಸಿಮ್ ಗಳ ವಾರ್ಷಿಕ ಶುಲ್ಕದಲ್ಲಿ 20% ರಿಯಾಯಿತಿಯೊಂದಿಗೆ ರೂ. 5,66,400/- ಮೊತ್ತದ ಬೇಡಿಕೆಯ ಪ್ರಸ್ತಾವನೆಯನ್ನು ಉಲ್ಲೇಖ 3 ರ ಪತ್ರದ ಮುಖಾಂತರ ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ, ಹಾಲಿ ಬಳಕೆಯಲ್ಲಿರುವ ಸದರಿ BSNL ಸಿಯುಜಿ ಯ HESCOM corporate signature tune ನ್ನು ರಿಂಗ್ ಬ್ಯಾಕ್ ಟ್ಯೂನ್ ಆಗಿ ಬಳಸುವ ಸೇವೆಯನ್ನು ಹುವಿಸಕಂನಿ ಯಲ್ಲಿನ ಅಧಿಕಾರಿ / ಸಿಬ್ಬಂದಿಗಳ ಸಿ.ಯು.ಜಿ ಸಂಪರ್ಕಗಳಿಗೆ ಒದಗಿಸುವುದರಿಂದ ವಿದ್ಯುತ್ ಸಂಪರ್ಕ ಹಾಗೂ ಉಳಿತಾಯದ ವಿಷಯಗಳಾದ ಎಲ್ಇಡಿ ಬಲ್ಪ್‌ಗಳ ಮೂಲಕ ಸಾಂಪ್ರದಾಯಿಕ ಬಲ್ಪ್‌ಗಳನ್ನು ಬದಲಿಸುವಿಕೆ, ಟೋಲ್ ಫ್ರೀ ಸಂಖ್ಯೆ 1912, ಹಾಗೂ ಇಂಧನ ದಕ್ಷತೆ ಮತ್ತು ಸಂರಕ್ಷಣೆ ಸಂದೇಶಗಳ ಪ್ರಚಾರ ಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಸದರಿ ಸೇವೆಯನ್ನು ಕಂಪನಿ ಹಿತದೃಷ್ಟಿಯಿಂದ ಮುಂದಿನ ಆರ್ಥಿಕ ವರ್ಷ 2022-23 ಕ್ಕೆ ಮುಂದುವರೆಸುವುದು ಅವಶ್ಯಕವಿರುವುದರಿಂದ ಬಿ ಎಸ್ ಎನ್ ಎಲ್ ಕಂಪನಿಯ ಪ್ರಾಧಿಕಾರಿಯವರು ಸಲ್ಲಿಸಿದ ಬೇಡಿಕೆ ಹುಂಡಿಯಲ್ಲಿರುವಂತೆ ಅಂದಾಜು ಒಟ್ಟು ರೂ. 5,66,400/- ಮೊತ್ತದ ವೆಚ್ಚವನ್ನು ಭರಿಸಲು ಸಲ್ಲಿಸಿದ ಪ್ರಸ್ತಾವನೆಗೆ ಮಾನ್ಯ ಉಲ್ಲೇಖ (2) ರಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಹುವಿಸಕಂನಿ, ಹುಬ್ಬಳ್ಳಿ ರವರು ಕಂಡಿಕೆ :251 ರಲ್ಲಿ ಅನುಮೋದಿಸಿರುವ ಪ್ರಯುಕ್ತ, ಈ ಕೆಳಗಿನಂತೆ ಆದೇಶಿಸಲಾಗಿದೆ.

ಪು.ತಿ.ನೋ.

CYS-6999 31 MAR 2022

# ಆದೇಶ

ಸಂಖ್ಯೆ:ಹುವಿಸಕಂನಿ/ಪ್ರುವ್ಯ/ಲೆ[ಸಿ]/ಸಲೆ[ಸಿ]/ಹಿಸ[ವಿ]/ಕಾರಕ-1716/18-19/CYS -_____ _________ ದಿನಾಂಕ:

ಪೀಠಿಕೆಯಲ್ಲಿ ವಿವರಿಸಿರುವಂತೆ, ಹುವಿಸಕಂನಿ ಯಲ್ಲಿನ ಅಧಿಕಾರಿ / ಸಿಬ್ಬಂದಿಗಳ ಸಿ.ಯು.ಜಿ ಸಂಪರ್ಕಗಳಿಗೆ ಹಾಲಿ ಬಳಕೆಯಲ್ಲಿರುವ ಸದರಿ BSNL ಸಿಯುಜಿ ಯ HESCOM Corporate Signature Tune ನ್ನು ರಿಂಗ್ ಬ್ಯಾಕ್ ಟ್ಯೂನ್ ಆಗಿ ಬಳಸಲು ದಿನಾಂಕ: 01.04.2022 ರಿಂದ 31.03.2023 (ಆರ್ಥಿಕ ವರ್ಷ 2022-23)ವರೆಗೆ ಮುಂದುವರೆಸಲು ಹಾಗೂ ಸದರಿ ಸೇವೆಯನ್ನು ಪಡೆಯುವಲ್ಲಿ ತಗಲುವ ಒಟ್ಟು ರೂ. 5,66,400/- ವನ್ನು ಪಾವತಿಸಲು ಅನುಮೋದಿಸಲಾಗಿದೆ.

31/3/22

ವಿನಾಯಕ ಎ ಪಾಲನಕರ[ಕ.ಆ.ಸೇ]
ಪ್ರಧಾನ ವ್ಯವಸ್ಥಾಪಕರು
(ಆಡಳಿತ ಮತ್ತು ಮಾ.ಸಂ.ಅ.)

"ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಹುವಿಸಕಂನಿ., ಹುಬ್ಬಳ್ಳಿ ಇವರಿಂದ ಅನುಮೋದಿಸಲ್ಪಟ್ಟಿದೆ."

ಪ್ರತಿ:

1. ಸಹಾಯಕ ಪ್ರಧಾನ ವ್ಯವಸ್ಥಾಪಕರು[ಸೇಲ್ಸ್], ಭಾರತೀಯ ಸಂಚಾರ ನಿಗಮ ನಿಯಮಿತ, ಮೊದಲನೇ ಮಹಡಿ, ಪಿಂಟೋ ರಸ್ತೆ, ಹುಬ್ಬಳ್ಳಿ- ಮಾಹಿತಿಗಾಗಿ ಮತ್ತು ಮುಂದಿನ ಕ್ರಮ ಕೈಗೊಳ್ಳಲು ಕೋರಲಾಗಿದೆ.
2. Sub Divisional Engineer (CSC),O/o GMT, BSNL, ಮೊದಲನೇ ಮಹಡಿ, ಪಿಂಟೋ ರಸ್ತೆ, ಹುಬ್ಬಳ್ಳಿ- ಮಾಹಿತಿಗಾಗಿ ಮತ್ತು ಮುಂದಿನ ಕ್ರಮ ಕೈಗೊಳ್ಳಲು ಕೋರಲಾಗಿದೆ.
3. ಲೆಕ್ಕಾಧಿಕಾರಿಗಳು[ಆಂ.ನಿ], ಕಂಪನಿ ಕಛೇರಿ, ಹುವಿಸಕಂನಿ- ಮಾಹಿತಿಗಾಗಿ ಮತ್ತು ಒಟ್ಟು ಸಿಮ್ 3000 ಸಿಮ್ ಗಳಿಗೆ HESCOM corporate signature tune ನ್ನು ರಿಂಗ್ ಬ್ಯಾಕ್ ಟ್ಯೂನ್ ಆಗಿ ಬಳಸುವ ಸೇವೆಯ ಒಟ್ಟು ವಾರ್ಷಿಕ ಬಾಡಿಗೆ ಮೊತ್ತವನ್ನು ಅಂದರೆ, 20% ರಿಯಾಯಿತಿಯೊಂದಿಗೆ ರೂ. 5,66,400/- ಗಳನ್ನು [GST ಸೇರಿದಂತೆ] ಮುಂಗಡವಾಗಿ ಪಾವತಿಸಲು ಮುಂದಿನ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಗಿರುತ್ತದೆ. ಮುಂದುವರೆದು, Sub Divisional Engineer(CSC),O/o GMT,BSNL, ಹುಬ್ಬಳ್ಳಿ ರವರ ಪತ್ರಸಂಖ್ಯೆ: CO(MS) HESCOM / CUG /2019-20 / VOL-1 / 6 DATED:-27.01.2022 ರ DEMAND NOTE ನ್ನು ಈ ಆದೇಶದೊಂದಿಗೆ ಲಗತ್ತಿಸಿ ತಮಗೆ ರವಾನಿಸಲಾಗಿದೆ.
4. ಅಧೀಕ್ಷಕ ಇಂಜಿನೀಯರ[ವಿ][ಮಾಹಿತಿ ತಂತ್ರಜ್ಞಾನ],ಕಂಪನಿ ಕಾರ್ಯಾಲಯ,ಹುವಿಸಕಂನಿ,ಹುಬ್ಬಳ್ಳಿ-ಮಾಹಿತಿಗಾಗಿ ಮತ್ತು ಸದರಿ ಆದೇಶವನ್ನು ಹುವಿಸಕಂನಿ ವೆಬ್ ಸೈಟನಲ್ಲಿ ಪ್ರಕಟಿಸಲು ಸೂಕ್ತ ಕ್ರಮ ಕೈಗೊಳ್ಳುವುದು.
5. ಮಹಾ ಕಡತ/ ಕಛೇರಿ ಪ್ರತಿ.

5